**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :10 ಸಿಡಬ್ಲು :12

ಸಾಕ್ಷಿಯ ಹೆಸರು : ಶ್ರೀ ಅನೀಲ ಮಹಾದೇವಿ ಈರಗಾರ ಅಲಿಯಾಸ ಮಾದರ
ತಾಯಿಯ ಹೆಸರು : ಶ್ರೀ ಮಹಾದೇವಿ ಈರಗಾರ
ವಯಸ್ಸು : 36 ವರ್ಷ
ಉದ್ಯೋಗ : ಕ್ಲಸ್ಟರ ಆಫೀಸರ, ಎನ್.ಜಿ.ಓ, ಮುಗಳಖೋಡ
ವಾಸ್ತವ್ಯ : ಮುಗಳಖೋಡ
ದಿನಾಂಕ : 14-07-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ಪ್ರಾಸಾಃ 1 ಬಸಪ್ಪ ಮಾದರ ನನ್ನ ತಾಯಿಯ ತಮ್ಮ. ಚಾಸಾಃ 8 ಲಕ್ಷ್ಮಣ ಕೆಳಗಡೆ ನಮ್ಮ ಸಮಾಜದ ಹಿರಿಯರು. ಚಾಸಾಃ 9 ಪ್ರಾಸಾಃ 6 ರವರು ಚಾಸಾಃ 1 ರವರ ಹೆಂಡತಿ. ಚಾಸಾಃ 10 ಜಯಪಾಲ ಮಾದರ ನನ್ನ ತಾಯಿಯ ತಮ್ಮ. ಚಾಸಾಃ 17 ಧನಪಾಲ ನನ್ನ ತಾಯಿಯ ತಮ್ಮ. ಚಾಸಾಃ 16 ಭೀಮಪ್ಪ ಮಾದರ ನನ್ನ ತಾಯಿಯ ಅಣ್ಣ. ಚಾಸಾಃ 13 ವಿಠ್ಠಲ ಮಾದರ ನನ್ನ ತಾಯಿಯ ಅಣ್ಣ. ಚಾಸಾಃ 11 ಪ್ರಾಸಾಃ 9 ಶಿವಾನಂದ ನಮ್ಮ ಮನೆಯ ಪಕ್ಕದವರು. ಚಾಸಾಃ 14 ರಾಜು ಸಂದ್ರಿಮನಿ, ಚಾಸಾಃ 15 ಮಹಾದೇವ ಸಂದ್ರಿಮನಿ, ಚಾಸಾಃ18 ಸುಶೀಲವ್ವ ಸಂದ್ರಿಮನಿ, ಚಾಸಾಃ 19 ಸುಂದ್ರವ್ವ ಮಾದರ, ಚಾಸಾಃ 20 ಕಸ್ತೂರಿ ಮಾದರ, ಚಾಸಾಃ 21 ಶಾಂತವ್ವ ಹಾದಿಮನಿ, ಚಾಸಾಃ 22 ಅಂಬವ್ವ, ಚಾಸಾಃ 23 ಸುಮಿತ್ರಾ, ಚಾಸಾಃ 24 ಮಾಲವ್ವ, ಚಾಸಾಃ 25 ಸುಶೀಲವ್ವ, ಚಾಸಾಃ 26 ನೀಲವ್ವ, ಚಾಸಾಃ 27 ರುಕ್ಮವ್ವ, ಚಾಸಾಃ 28 ಯಲ್ಲವ್ವ, ಚಾಸಾಃ 29 ಹನಮಂತ, ಚಾಸಾಃ 30 ಯಮನಪ್ಪ ಚಾಸಾಃ 31 ದುರ್ಗಪ್ಪ, ಚಾಸಾಃ 32 ಪ್ರಕಾಶ ನಮ್ಮ ಓಣಿಯವರು. ಚಾಸಾಃ 33 ಮತ್ತು ಚಾಸಾಃ 34 ರವರು

ನಮ್ಮ ಪಕ್ಕದ ಓಣಿಯವರು. ಚಾಸಾಃ 35 ರವರು ಮುಗಳಖೋಡ ಗ್ರಾಮದ ಪುರಸಭೆಯ ಮುಖ್ಯಾಧಿಕಾರಿಗಳು. ಚಾಸಾಃ 36 ಮಹಾಂತೇಶ ಗೋಳಸಂಗಿ ಪುರಸಭೆಯ ಅಧ್ಯಕ್ಷರು. ಚಾಸಾಃ37, ಚಾಸಾಃ 38 ಮತ್ತು ಚಾಸಾಃ 39 ರವರು ಪುರಸಭೆಯ ಸಿಬ್ಬಂದಿ. ಚಾಸಾಃ 40 ನಮ್ಮ ಮನೆಯ ಪಕ್ಕದಲ್ಲಿ ಚಿಕನ್ ಅಂಗಡಿ ನಡೆಸುತ್ತಾರೆ. ಚಾಸಾಃ 41 ರವರು ನಮ್ಮ ಮನೆಯ ಪಕ್ಕದಲ್ಲಿದ್ದಾರೆ. ಚಾಸಾಃ 42 ನಮ್ಮ ಓಣಿಯವರು. ಚಾಸಾಃ 43 ನಮ್ಮ ಪಕ್ಕದ ಓಣಿಯವರು.

2. ನಾನು ಹಿಂದೂ ಧರ್ಮದ ಪರಿಶಿಷ್ಟ ಜಾತಿಯ ಮಾದರ ಜನಾಂಗಕ್ಕೆ ಸೇರಿದ್ದೇನೆ. 1 ರಿಂದ 34 ಆರೋಪಿತರು ನಮ್ಮ ಊರಿನವರು ಮತ್ತು ನನಗೆ ಗೊತ್ತಿರುತ್ತಾರೆ. ಆರೋಪಿ ಸಂಖ್ಯೆ 27 ಮಾಳಪ್ಪ ಮತ್ತು 28 ಕೆಂಚಪ್ಪ ಕುರುಬ ಜನಾಂಗಕ್ಕೆ ಸೇರಿದವರಾಗಿರುತ್ತಾರೆ. ಆರೋಪಿ ಸಂಖ್ಯೆ 29 ಭೀಮಪ್ಪ(ಮೃತರಾಗಿದ್ದಾರೆ) ಲಿಂಗಾಯತ ಸಮುದಾಯಕ್ಕೆ ಸೇರಿದ್ದಾರೆ. ಉಳಿದ ಆರೋಪಿತರು ಜೈನ ಸಮುದಾಯಕ್ಕೆ ಸೇರಿದ್ದಾರೆ.

3. ನಮ್ಮ ಮನೆಯ ಉತ್ತರ ದಿಕ್ಕಿಗೆ ಗ್ರಾಮ ಠಾಣಾಗೆ ಸೇರಿದ ಖಾಲಿ ಜಾಗೆ ಇದೆ. ಆ ಜಾಗದಲ್ಲಿ ನಮ್ಮ ಸಮುದಾಯದವರು ಸಮುದಾಯ ಭವನ ಕಟ್ಟಬೇಕೆಂದು ನಿರ್ಧರಿಸಿದ್ದೇವು. ಅದೇ ಜಾಗದಲ್ಲಿ ಜೈನ ಸಮುದಾಯದವರು ಕಟ್ಟಡ ಕಟ್ಟಲು ನಿರ್ಧರಿಸಿದ್ದರು.

4. ದಿಃ 26-08-2017 ರಂದು ಬೆಳಗ್ಗೆ 9:30 ರ ಸಮಯಕ್ಕೆ ನಾನು ಮನೆಯಲ್ಲೇ ಇದ್ದೇನು. ಆ ಸಮಯದಲ್ಲಿ ನಮ್ಮ ಸಮುದಾಯದ ದುರ್ಗಪ್ಪ ಪೂಜಾರಿ ಅವರು ಬಂದು ಖಾಲಿ ಇರುವ ಜಾಗದಲ್ಲಿ ಜೈನ ಸಮುದಾಯದವರು ಕಟ್ಟಡ ಕಟ್ಟುತ್ತಿದ್ದಾರೆ ಅದನ್ನು ನಿಲ್ಲಿಸಲು ಪುರಸಭೆ ಆಡಳಿತ ಅಧಿಕಾರಿಯವರಿಗೆ ಅರ್ಜಿ ಕೊಡಲು ಹೋಗೋಣ ಬನ್ನಿ ಎಂದು ಕರೆಯಲು ಬಂದಿದ್ದರು.

5. ನಾವು ನಮ್ಮ ಸಮುದಾಯದ ಮಹಿಳೆಯರನ್ನು ಒಳಗೊಂಡಂತೆ ಸುಮಾರು 50-60 ಜನ ಸೇರಿ ಪುರಸಭೆಗೆ ಹೋಗಿ ಪುರಸಭೆಯ ಆಡಳಿತ ಅಧಿಕಾರಿಯವರಿಗೆ ವಿಷಯ ತಿಳಿಸಿದೇವು.

ಚಾಸಾಃ 35 ರವರು ಹೊಸ ಆಡಳಿತ ಅಧಿಕಾರಿಯಾಗಿ ಬಂದಿದ್ದು ಅವರಿಗೆ ಆ ಜಾಗದ ಬಗ್ಗೆ ಮಾಹಿತಿ ಇರಲಿಲ್ಲ, ಆ ಕಾರಣ ಅವರು ಸಿಬ್ಬಂದಿಯವರನ್ನು ವಿಚಾರಿಸಿದರು.

6. ಹಿಂದಿನ ಆಡಳಿತ ಅಧಿಕಾರಿಯಾದ ಚಾಸಾಃ 44 ಕಾಶಿಲಿಂಗ ಕಿಲಾರಿ ಅವರು ಆರೋಪಿತರಿಗೆ ಖಾಲಿ ಜಾಗದಲ್ಲಿ ಕಟ್ಟಡ ಕಟ್ಟಬಾರದೆಂದು ನೋಟಿಸ ಕೊಟ್ಟಿದ್ದರು, ಆದರೂ ಸಹ ಜೈನ ಸಮುದಾಯದವರಾದ ಆರೋಪಿತರು ಅದನ್ನು ಸ್ವೀಕರಿಸಿರುವುದಿಲ್ಲ. ನಾವು ಚಾಸಾಃ 35 ರವರಿಗೆ ಮನವಿ ಮಾಡಿದ ನಂತರ ಚಾಸಾಃ 35 ರವರು ಗ್ರಾಮ ಠಾಣಾ ಖಾಲಿ ಜಾಗಕ್ಕೆ ಬಂದಿದ್ದರು. ಆ ಸಮಯದಲ್ಲಿ ಆರೋಪಿತರು ಕಟ್ಟಡ ಕಟ್ಟಲು ಪಿಲ್ಲರಗಳನ್ನು ನಿಲ್ಲಿಸಿದ್ದರು.

7. ಚಾಸಾಃ35 ರವರು ಜೈನ ಸಮುದಾಯದವರಾದ ಆರೋಪಿತರಿಗೆ ಕಟ್ಟಡ ಕಟ್ಟಬಾರದೆಂದು ಹೇಳಿದರು. ಆದರೂ ಸಹ ಆರೋಪಿತರು ನಾವು ಕಟ್ಟಡದ ಕೆಲಸವನ್ನು ನಿಲ್ಲಿಸುವುದಿಲ್ಲ ನಾವು ಕಟ್ಟಡವನ್ನು ಕಟ್ಟುತ್ತೇವೆ ಎಂದು ಹೇಳಿ ಕೆಲಸವನ್ನು ಮುಂದುವರೆಸಿದರು.

8. ಚಾಸಾಃ 32 ಪ್ರಕಾಶ ರವರು ಸ್ಥಳದಲ್ಲಿದ್ದ ಮುಣ್ಣಿನ ರಾಶಿಯಿಂದ ಜಾರಿ ಕೆಳಗೆ ಬಿದ್ದರು. ಆ ವಿಚಾರದಲ್ಲಿ ಆರೋಪಿತರು ನಾವು ಚಾಸಾಃ 32 ರವರಿಗೆ ಏನೋ ಮಾಡಿದೇವು ಎಂದು ತಪ್ಪು ತಿಳಿದುಕೊಂಡು ಆರೋಪಿತರು ನಮಗೆ ಮಾದರ ಸೂಳೆಮಕ್ಕಳರಾ ಎಂದು ಜಾತಿ ನಿಂದನೆ ಮಾಡಿದರು ಮತ್ತು ನಮ್ಮ ಮೇಲೆ ಕಲ್ಲುಗಳಿಂದ ಹೊಡೆಯಲು ಪ್ರಾರಂಭಿಸಿದರು.

9. ಬಿದಿರಿನ ಬಂಬು, ಕಬ್ಬಿಣದ ರಾಡು ಅವುಗಳಿಂದ ಆರೋಪಿತರು ನಮ್ಮ ಸಮುದಾಯದವರಿಗೆ ಹೊಡೆಯಲು ಪ್ರಾರಂಭಿಸಿದರು. 2 ನೇ ಆರೋಪಿ ಕಬ್ಬಿಣದ ರಾಡನಿಂದ ನನ್ನ ತಲೆಯ ಮೇಲೆ ಬಲ ಕಿವಿಯ ಪಕ್ಕದಲ್ಲಿ ಹೊಡೆದನು. ನಾನು ತಲೆ ಹಿಡಿದುಕೊಂಡು ಓಡುತ್ತಿದ್ದಾಗ ಚಾಸಾಃ 1 ರವರಿಗೆ ಆರೋಪಿತರು ಕಲ್ಲುಗಳಿಂದ ಹೊಡೆಯುತ್ತಿದ್ದರು. ನಮ್ಮೊಂದಿಗೆ ಬಂದಿದ್ದ ಮಹಿಳೆಯರಿಗೂ ಸಹ ಆರೋಪಿತರು ಕಲ್ಲುಗಳಿಂದ ಹೊಡೆದಿದ್ದು ಅವರಿಗೂ ಸಹ ಗಾಯಗಳು ಆಗಿದ್ದವು.

10. ನಂತರ ನಾವುಗಳು ಕ್ರೂಸರ್ ಗಾಡಿಯಲ್ಲಿ ಹಾರೂಗೇರಿ ಸರ್ಕಾರಿ ಆಸ್ಪತ್ರೆಗೆ ಹೋದೇವು. ಅಲ್ಲಿ ನಾವು ಪ್ರಾಥಮಿಕ ಚಿಕಿತ್ಸೆ ಪಡೆದುಕೊಂಡು ನಂತರ ನಾರಗೊಂಡ ಖಾಸಗಿ ಆಸ್ಪತ್ರೆಗೆ ಹೋದೇವು.

11. ಘಟನೆಯ ಬಗ್ಗೆ ಚಾಸಾಃ 1 ನನ್ನ ಸೋದರ ಮಾವ ದೂರು ನೀಡಿದ್ದಾರೆ. ನಾನು ನಾರಗೊಂಡ ಖಾಸಗಿ ಆಸ್ಪತ್ರೆಯಲ್ಲಿದ್ದಾಗ ದಿಃ27-08-2017 ರಂದು ಪೋಲಿಸರು ಬಂದು ನನ್ನ ಹೇಳಿಕೆಯನ್ನು ತೆಗೆದುಕೊಂಡಿದ್ದಾರೆ.

12. ದಿಃ 01-09-2017 ರಂದು ನಾನು ಪೋಲಿಸ ಠಾಣೆಗೆ ಹೋಗಿ ಮುಂದುವರೆದ ಹೇಳಿಕೆಯನ್ನು ನೀಡಿದ್ದೇನೆ. ದಿಃ 02-10-2017 ರಂದು ಪುನಃ ನಾನು ಪೋಲಿಸ ಠಾಣೆಗೆ ಹೋಗಿ ಮುಂದುವರೆದ ಹೇಳಿಕೆಯನ್ನು ನೀಡಿದ್ದೇನೆ.

13. ಆರೋಪಿತರು ನಮಗೆ ಹೊಡೆಯಲು ಉಪಯೋಗಿಸಿದ ಕಲ್ಲು, ಕಬ್ಬಿಣದ ರಾಡು, ಬಿದಿರಿನ ಬಂಬುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಈಗಾಗಲೇ ಹಾಜರುಮಾಡಿರುವ ಬಿದಿರಿನ ಬಡಿಗೆ, ಕಬ್ಬಿಣದ ಸಲಾಕೆ ಮತ್ತು 14 ಕಲ್ಲುಗಳನ್ನು ಸಾಕ್ಷಿ ಗುರುತಿಸಿದ್ದಾರೆ ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 3 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ 3 ರಿಂದ 9, 11 ರಿಂದ 14, 16 ರಿಂದ 20, 22 ರಿಂದ 28, 31 ರಿಂದ 34 ನೇ ಆರೋಪಿತರ ಪರವಾಗಿ ಶ್ರೀ ಎ.ಬಿ.ಬಿ .ವಕೀಲರಿಂದ**

ನಾನು ಎಮ್.ಎ ಪದವಿಧರ. ನಾನು ಘಟಪ್ರಭಾದಲ್ಲಿ ಎನ್.ಜಿ.ಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಬೆಳಗ್ಗೆ 8:00 ಗಂಟೆಗೆ ಕೆಲಸಕ್ಕೆ ಹೋದರೆ ಸಂಜೆ 7:00 ಗಂಟೆಗೆ ಮನೆಗೆ ವಾಪಸ ಬರುತ್ತೇನೆ. ನಮ್ಮ ಮನೆಯ ಉತ್ತರಕ್ಕೆ ಇರುವ ಖಾಲಿ ಜಾಗ ಜೈನ ಸಮುದಾಯಕ್ಕೆ ಸೇರಿರುತ್ತದೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಜಾಗ ಗ್ರಾಮ

ಠಾಣಾಗೆ ಸೇರಿದ್ದು ಎಂದು ಹೇಳಿದ್ದಾರೆ. ನಾನು ಆ ಬಗ್ಗೆ ದಾಖಲೆಯನ್ನು ನೋಡಿಲ್ಲ ಆದರೆ ಮುಖ್ಯ ಆಡಳಿತ ಅಧಿಕಾರಿಯವರು ನನಗೆ ಹೇಳಿದ್ದಾರೆ.

2. ನಮ್ಮ ಮನೆಯ ಪಕ್ಕದಲ್ಲಿರುವ ಖಾಲಿ ಜಾಗ ಸಂಖ್ಯೆ 643 ಬಹಳ ಹಿಂದಿನಿಂದ ಜೈನ ಸಮುದಾಯದವರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ಸ್ಥಳದಲ್ಲಿ ಜೈನ ಸಮುದಾಯದವರು ಕಟ್ಟಡ ಕಟ್ಟಲು ಪುರಸಭೆಯಿಂದ 4 ಜನ ಆರೋಪಿತರ ಹೆಸರಿನಲ್ಲಿ ಲೈಸನ್ಸ ಪಡೆದುಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

3. ಆರೋಪಿತರು ಸದರಿ ನಿವೇಶನ ಸಂಖ್ಯೆ 643 ರಲ್ಲಿ ಕಟ್ಟಡ ಕಟ್ಟಲು ಬ್ಲೂ ಪ್ರಿಂಟ್ ತಯಾರಿಸಿ ಸಮುದಾಯದ ವತಿಯಿಂದ ಕಟ್ಟಡ ಕಟ್ಟಲು ಪ್ರಾರಂಭಿಸಿದರು ಎನ್ನುವುದು ಸರಿಯಲ್ಲ. ಖಾಲಿ ಜಾಗದ ವಿಚಾರವಾಗಿ ನಮ್ಮ ಸಮುದಾಯದವರು ಆರೋಪಿತರ ಮೇಲೆ ರಾಯಬಾಗ ಕೋರ್ಟನಲ್ಲಿ ಸಿವಿಲ್ ದಾವೆ ಹಾಕಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನ್ಯಾಯಾಲಯವು ಆರೋಪಿತರ ಪರವಾಗಿ ತೀರ್ಮಾನ ಮಾಡಿದೆ ಎನ್ನುವುದು ಸರಿಯಲ್ಲ.

4. ನಮ್ಮ ಸಮುದಾಯದವರು ಬೆಂಗಳೂರಿನಲ್ಲಿರುವ ಲ್ಯಾಂಡ್ ಗ್ರ್ಯಾಬಿಂಗ್ ಟ್ರಿಬ್ಯೂನಲ್‌ನಲ್ಲಿ ದೂರು ಸಲ್ಲಿಸಿದ್ದೇವು ಎನ್ನುವುದು ಸರಿಯಲ್ಲ. ಆ ಪ್ರಕರಣವೂ ಸಹ ವಿಚಾರಣೆಯಾಗಿ ವಜಾಗೊಂಡಿದೆ ಎನ್ನುವುದು ಸರಿಯಲ್ಲ.

5. ಈ ಪ್ರಕರಣದಲ್ಲಿ ನನಗೆ ಜಾಗದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪುರಸಭೆಯವರು ಎಲ್ಲಾ ಆರೋಪಿತರಿಗೆ ವೈಯಕ್ತಿಕವಾಗಿ ನೋಟಿಸ ಕೊಟ್ಟ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ವಿಚಾರವನ್ನು ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ಸರಿಯಲ್ಲ.

6. ನಿವೇಶನ ಸಂಖ್ಯೆ 643 ರ ದಾಖಲೆಗಳು ಈಗಲೂ ಸಹ 1 ನೇ ಆರೋಪಿ, 3 ನೇ ಆರೋಪಿ, 5 ನೇ ಆರೋಪಿ, 7 ನೇ ಆರೋಪಿ ಇವರ ಹೆಸರಿನಲ್ಲಿವೆ ಎನ್ನುವುದು ಸರಿಯಲ್ಲ. ಈಗ ಹೇಳಿದ ಆರೋಪಿತರು ಸದರಿ ನಿವೇಶನದಲ್ಲಿ ಕಟ್ಟಡ ಕಟ್ಟಲು ಪುರಸಭೆಯಿಂದ ಅನುಮತಿ ಪಡೆದುಕೊಂಡಿದ್ದಾರೆ ಎನ್ನುವುದು ಸರಿಯಲ್ಲ.

7. ಘಟನಾ ಸ್ಥಳದಲ್ಲಿ ಘಟನೆ ಆದ ಸಮಯದಲ್ಲಿ ಸುಮಾರು 100 ರಿಂದ 200 ಜನ ಇದ್ದರು. ಅದರಲ್ಲಿ ಯಾರು ಯಾರು ಇದ್ದರು ಎಂದು ಹೇಳಲು ಆಗುವುದಿಲ್ಲ ಎನ್ನುವುದಕ್ಕೆ ಸಾಕ್ಷಿ ಕೆಲವರ ಹೆಸರು ಗೊತ್ತು ಎಂದು ಹೇಳಿದ್ದಾರೆ.

8. ನಮ್ಮೂರಿನಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎನ್ನುವುದು ಸರಿ. ಆ ಆಸ್ಪತ್ರೆಯಲ್ಲಿ ಎಲ್ಲಾ ರೀತಿಯ ಆಧುನಿಕ ವ್ಯವಸ್ಥೆ ಇದೆ ಎನ್ನುವುದು ಸರಿಯಲ್ಲ.

9. ನಾವು ಸರ್ಕಾರಿ ಆಸ್ಪತ್ರೆಗೆ ಹೋಗಿ ನಂತರ ನಾರಗೊಂಡ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇವೆ ಎನ್ನುವುದು ಸರಿಯಲ್ಲ. ನಾವು ಚಿಕಿತ್ಸೆಗೆಂದು ಹೋದ ಗಾಡಿ ನಂಬರ ಈಗ ಹೇಳಲು ಬರುವುದಿಲ್ಲ.

10. 2 ನೇ ಆರೋಪಿ ಕಬ್ಬಿಣದ ರಾಡ್‌ನಿಂದ ನನ್ನ ಬಲಕಿವಿಯ ಪಕ್ಕದಲ್ಲಿ ತಲೆಯ ಮೇಲೆ ಹೊಡೆದನೆಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿವೆ ಎನ್ನುವುದು ಸರಿಯಲ್ಲ.

11. ಸ್ಥಳಕ್ಕೆ ಮುಖ್ಯಾಧಿಕಾರಿಗಳು ಬಂದಿದ್ದು, ಆ ಸಮಯದಲ್ಲಿ ಆರೋಪಿತರು ಕಟ್ಟಡ ಕಟ್ಟಲು ಪಿಲ್ಲರಗಳನ್ನು ಹಾಕುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

12. ನಿವೇಶನ ಸಂಖ್ಯೆ 643 ವಿಚಾರವಾಗಿ ನಮಗೂ ಮತ್ತು ಆರೋಪಿತರಿಗೂ ಮೊದಲಿನಿಂದಲೂ ತಕರಾರು ಇದೆ ಎನ್ನುವುದು ಸರಿಯಲ್ಲ. ಆರೋಪಿತರು ನನ್ನ ಮಾವ ಚಾಸಾಃ 1 ರವರಿಗೆ ಹೊಡೆದಿದ್ದರಿಂದ ಅವರಿಗೂ ಗಾಯ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸ್ಥಳದಲ್ಲಿದ್ದ ಮಹಿಳೆರಿಗೂ ಸಹ ಆರೋಪಿತರು ಕಲ್ಲುಗಳಿಂದ ಹೊಡೆದು ಗಾಯ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

13. ದಿಃ 27-08-2017 ರಂದು ನಾನು ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಬಂದು ನನ್ನ ಹೇಳಿಕೆಯನ್ನು ತೆಗೆದುಕೊಂಡಿದ್ದಾರೆಂದು, ದಿಃ 01-09-2017 ಮತ್ತು ದಿಃ02-10-2017 ರಂದು ಮುಂದುವರೆದ ಹೇಳಿಕೆಗಳನ್ನು ನೀಡಿದ್ದೇನೆ ಎನ್ನುವುದು ಸರಿಯಲ್ಲ. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

14. ನನ್ನ ಮೇಲೆ ಮತ್ತು ನಮ್ಮ ಸಮುದಾಯದ 17 ಜನರ ಮೇಲೆ ಆರೋಪಿತರು ದೂರು ಕೊಟ್ಟಿದ್ದಾರೆ ಎನ್ನುವುದು ಸರಿ. ಆ ಪ್ರಕರಣವು ಸ್ಪೇಶಲ ಕೇಸ ನಂಬರ 963/2019 ರಂತೆ ಇದೇ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎನ್ನುವುದು ಸರಿ.

15. ಆರೋಪಿತರು ನಮ್ಮ ಸಮುದಾಯದವರ ಮೇಲೆ ಕಲ್ಲಿನಿಂದ, ಬಿದಿರು ಹಾಗೂ ಕಬ್ಬಿಣದ ರಾಡ್‌ನಿಂದ ಹೊಡೆದಿರುವುದಿಲ್ಲ ಎನ್ನುವುದು ಸರಿಯಲ್ಲ. ನಮ್ಮ ಜನಾಂಗದವರಲ್ಲದೇ ಬೇರೆ ಯಾವುದೇ ಜನಾಂಗದವರ ಮೇಲೆ ಆರೋಪಿತರು ಹಲ್ಲೆ ಮಾಡಿಲ್ಲ ಎನ್ನುವುದು ಸರಿಯಲ್ಲ.

16. ನಮ್ಮ ಸಮಾಜದವರೇ ಆರೋಪಿತರ ಮೇಲೆ ಹಲ್ಲೆ ಮಾಡಿ ನಮ್ಮ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಸುಳ್ಳು ಪಿರ್ಯಾದಿ ಕೊಟ್ಟಿದ್ದೇವೆ ಎನ್ನುವುದು ಸರಿಯಲ್ಲ.

17. ಮು.ಮಾ.1,2,3 ಮತ್ತು 4 ಸಾಮಾನ್ಯವಾಗಿ ಕಟ್ಟಡ ಕಟ್ಟುವ ಎಲ್ಲಾ ಸ್ಥಳಗಳಲ್ಲೂ ಇರುತ್ತವೆ ಎನ್ನುವುದು ಸರಿ.

**ಪಾಟೀ ಸವಾಲು: 1 ಮತ್ತು 2 ನೇ ಆರೋಪಿತರ ಪರ ಶ್ರೀ.ಎಮ್.ಸಿ.ಕೆ ವಕೀಲರಿಂದ ಶ್ರೀ. ಬಿ.ಜೆ.ಜಿ. ವಕೀಲರ ಪರವಾಗಿ**

ಶ್ರೀ.ಎ.ಬಿ.ಬಿ ವಕೀಲರು ಮಾಡಿದ ಪಾಟೀ ಸವಾಲನ್ನು 1 ಮತ್ತು 2 ನೇ ಆರೋಪಿತರ ಪರ ಶ್ರೀ.ಎಮ್.ಸಿ.ಕೆ ವಕೀಲರು ಶ್ರೀ.ಬಿ.ಜೆ.ಜಿ. ವಕೀಲರ ಪರವಾಗಿ ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.